KATK920004002024

# **ಪ್ರಧಾನ** ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
# ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**,** ತಿಪಟೂರು

ಉಪಸ್ಥಿತರುಃ ಶ್ರೀ ಭರತ್ ಚಂದ್ರ ಕೆ.ಎಸ್.**,** ಬಿ.ಎ. ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದಂ.ನ್ಯಾದಂ., ತಿಪಟೂರು

ದಿನಾಂಕಃ **20.07.2026**

**ಸಿ.ಸಿ.ನಂ.100/2024**

ಸರ್ಕಾರದ ಪರವಾಗಿಃ ತಿಪಟೂರು ಗ್ರಾಮಾಂತರ ಪೊಲೀಸ್ ಪಿ.ಎಸ್.ಐ

(ಸರ್ಕಾರದ ಪರವಾಗಿ ಸ.ಸ.ಅ.ರವರು ಪ್ರತಿನಿಧಿಸುತ್ತಾರೆ )

-ವಿರುದ್ಧ-

ಆರೋಪಿತರು:- **1.** ಕಾಂತರಾಜು ಕೆ.ಬಿ ತಂದೆ ಲೇಟ್ ಬಸವಲಿಂಗಪ್ಪ,
ವಯಸ್ಸು 52 ವರ್ಷ,

**2.** ಪೂಜಾ .ಕೆ ಕೋಂ ತ್ರಿನೇಶ್,
ವಯಸ್ಸು 22 ವರ್ಷ,

**3.** ಪವಿತ್ರ ಕೋಂ ಕಾಂತರಾಜು
ವಯಸ್ಸು 48 ವರ್ಷ,

**4.** ಸಾವಿತ್ರಮ್ಮ ಕೋಂ ಲೇಟ್ ಬಸವಲಿಂಗಪ್ಪ
ವಯಸ್ಸು 70 ವರ್ಷ,

ಎಲ್ಲರೂ ವಾಸಃ ಕಾಳೇಗೌಡನ ಪಾಳ್ಯ ,
ಕಸಬಾ ಹೋಬಳಿ,
ತಿಪಟೂರು ತಾಲ್ಲೂಕು,
ತುಮಕೂರು.

(ಶ್ರೀ ಬಿ.ಡಿ.ಜೆ., ವಕೀಲರು)

...........

ಅಪರಾಧದ ವರದಿಯನ್ನು ಸಲ್ಲಿಸಿದ ದಿನಾಂಕಃ- 06.02.2024

ಅಪರಾಧ ನಡೆದ ದಿನಾಂಕಃ- 03.02.2024

| | |
|---|---|
| ಅಪರಾಧದ ಕಾಯಿದೆ ಮತ್ತು ಕಲಂಃ- | ಭಾ.ದಂ.ಸಂ. ಕಲಂ 504, 506, 427 ಸಹವಾಚಕ 34 |
| ಸಾಕ್ಷಿ ವಿಚಾರಣೆಯನ್ನು ಮಾಡಿದ ದಿನಾಂಕಃ- | 14.07.2026 |
| ಸಾಕ್ಷಿ ವಿಚಾರಣೆಯನ್ನು ಮುಗಿಸಿದ ದಿನಾಂಕಃ- | 14.07.2026 |
| ನ್ಯಾಯಾಧೀಶರ ಅಭಿಪ್ರಾಯಃ- | ಆರೋಪಿತರು ಬಿಡುಗಡೆಗೆ ಅರ್ಹರಾಗಿರುತ್ತಾರೆ |

**:: ತೀರ್ಪು::**

ತಿಪಟೂರು ಗ್ರಾಮಾಂತರ ಪೋಲಿಸ್ ಠಾಣೆಯ ಪೊಲೀಸ್ ಉಪನಿರೀಕ್ಷಕರು, ಆರೋಪಿತರ ವಿರುದ್ಧ ಭಾರತ ದಂಡ ಸಂಹಿತೆ ಕಲಂ 504, 506, 427 ಸಹವಾಚಕ 34ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತಾರೆಂದು ಪ್ರಸ್ತುತ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

**2.** ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ**-**

ಅಭಿಯೋಜನೆಯವರು ಆರೋಪಿಸಿದಂತೆ 1, 2, 3 ಮತ್ತು 4 ನೇ ಆರೋಪಿತರಾದ ನೀವುಗಳು ತಿಪಟೂರು ತಾಲ್ಲೂಕು, ಕಸಬಾ ಹೋಬಳಿ, ರಾಮಶೆಟ್ಟಿ ಹಳ್ಳಿ ಗ್ರಾಮದ ಸರ್ವೆ ನಂ.25/1, 25/4ರ ಜಮೀನಿನ ಚಾಸಾ.1ರವರ ತೋಟದ ಮನೆಯ ಬಳಿ ಬಂದು ಜಮೀನಿನಲ್ಲಿ ನಡೆದಾಡುವ ದಾರಿಯ ವಿಚಾರವಾಗಿ 1, 2, 3 ಮತ್ತು 4ನೇ ಆರೋಪಿತರಾದ ನೀವುಗಳು ದಿಃ03.02.2024ರಂದು ಮದ್ಯಾಹ್ನ 12.30 ಗಂಟೆ ಸಮಯದಲ್ಲಿ ಸಮಾನ ಉದ್ದೇಶದಿಂದ 1 ನೇ ಆರೋಪಿತರು ಚಾಸಾ.1 ಅದಿತ್ಯರವರಿಗೆ ನಮ್ಮ ತೋಟಕ್ಕೆ ಹೋಗುವ ದಾರಿಗೆ ಅಡ್ಡಲಾಗಿ

ಕಲ್ಲು ಕಂಬವನ್ನು ನೆಟ್ಟಿರುತ್ತೀರಾ ಬೋಳಿ ಮಕ್ಕಳಾ, ಸೂಳೆ ಮಕ್ಕಳಾ ಅಂತಾ ಅವಾಚ್ಯವಾಗಿ ಬೈದ್ದು 2, 3 ಮತ್ತು 4 ನೇ ಆರೋಪಿತರುಗಳು ಕಲ್ಲು ತಂತಿ ಕಲ್ಲು ಕಂಬವನ್ನು ಕೀಳುತ್ತಿರುವಾಗ ಕೇಳಲು ಹೋದ ಚಾಸಾ.1 ಅದಿತ್ಯ, ಚಾಸಾ.2 ಸುನಂದ ಮತ್ತು ಚಾಸಾ.3 ಬಸವರಾಜುರವರುಗಳಿಗೆ ಸೂಳೆಮಕ್ಕಳಾ ಬೋಳಿಮಕ್ಕಳಾ ದಾರಿಗೆ ಅಡ್ಡಲಾಗಿ ಕಲ್ಲು ನೆಟ್ಟಿರುತ್ತಾರೆಂತಾ ಬೈದು ಇನ್ನು ಮುಂದೆ ಈ ದಾರಿಯಲ್ಲಿ ನಾವು ನಡೆದಾಡುವಾಗ ಅಡ್ಡಿಪಡಿಸಿದರೆ ನಿಮ್ಮಗಳನ್ನು ನಾವು ಸುಮ್ಮನೆ ಬಿಡುವುದಿಲ್ಲವೆಂತಾ ಕೊಲೆ ಬೆದರಿಕೆ ಹಾಕಿದ್ದು ಮತ್ತು 2 ನೇ ಆರೋಪಿತರು ಕಲ್ಲನ್ನು ತೆಗೆದುಕೊಂಡು ಚಾಸಾ.2 ಸುನಂದರವರ ವಾಸದ ಮನೆಯ ಕಿಟಕಿಯ ಗಾಜನ್ನು ಹೊಡೆದು ಹಾಕಿ ರೂ.1000/- ನಷ್ಟವನ್ನುಂಟು ಮಾಡಿದ್ದು ಅಂತ ಈ ಕುರಿತು ಚಾಸಾ-1 ಅದಿತ್ಯರವರು ತಿಪಟೂರು ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದು ಅದರ ಅಧಾರದ ಮೇಲೆ ಪೊಲೀಸರು ತಮ್ಮ ಠಾಣಾ ಗುನ್ನಾ ನಂ.9/2024 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ತಮ್ಮ ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ಗುನ್ನಾ ಜಾಗೆಯ ಪಂಚನಾಮೆಯನ್ನು ಮಾಡಿಕೊಂಡು ಸಾಕ್ಷಿಗಳ ಹೇಳಿಕೆಗಳನ್ನು ಪಡೆದುಕೊಂಡು ತನಿಖೆ ಪೂರ್ಣಗೊಂಡ ನಂತರ ಆರೋಪಿತರ ವಿರುದ್ಧ ಭಾ.ದಂ.ಸಂ. ಕಲಂ 504, 506, 427 ಸಹವಾಚಕ 34 ರ ಅಡಿಯಲ್ಲಿ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

**3.**ಆರೋಪಿತರು ಗುನ್ಹೆ ದಾಖಾಲಾದ ನಂತರ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ದೋಷಾರೋಪಣಾ ಪತ್ರ ಸಲ್ಲಿಸಿದ ನಂತರ ಅಪರಾಧ ಕುರಿತು ಸಂಜ್ಞೆ ತೆಗೆದುಕೊಂಡ ಸಮನ್ಸ್ ಮೂಲಕ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಕೊಳ್ಳಲಾಯಿತು.

**4.** ದಂ.ಪ್ರ.ಸಂ ಕಲಂ 207 ರ ಅನ್ವಯ ದೋಷಾರೋಪಣ ಪತ್ರದ ನಕಲು ಪ್ರತಿಯನ್ನು ಆರೋಪಿತರಿಗೆ ಪೂರೈಸಲಾಯಿತು. ನಂತರ ದೋಷಾರೋಪಣೆಯನ್ನು ರಚಿಸಿ ಆರೋಪಿತರಿಗೆ ಓದಿ ಹೇಳಲಾಗಿ ಆರೋಪಿತರು ಸದರಿ ಆಪಾದನೆಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

**5.**ಅಭಿಯೋಜನೆಯು ಆರೋಪಿತರ ಮೇಲೆ ಆರೋಪಣೆಗಳನ್ನು ರುಜುವಾತು ಪಡಿಸುವ ಸಲುವಾಗಿ ಒಟ್ಟು 3 ಸಾಕ್ಷಿಗಳನ್ನು ಫ್ರಾಸಾ-1 ರಿಂದ 3 ರವರನ್ನು ವಿಚಾರಣೆಗೂಳಪಡಿಸಿ ನಿಪಿ-1 ರಿಂದ 6 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು.

**6.**ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತು ಪಡಿಸಲು ಪಿರ್ಯಾದುದಾರರನ್ನು ಫ್ರಾಸಾ.1 ಆಗಿ ಹಾಗೂ ಫ್ರಾಸಾ.2, ಫ್ರಾಸಾ.3 ರವರು ಘಟನೆಯ ಪ್ರತ್ಯಕ್ಷ ಸಾಕ್ಷಿದಾರರನ್ನು ವಿಚಾರಣೆ ಮಾಡಿರುತ್ತಾರೆ. ಪಿರ್ಯಾದುದಾರರ ವಿಚಾರಣೆಯಾದ ನಂತರ ಮಾನ್ಯ ಸಹಾಯಕ ಅಭಿಯೋಜಕರು ಇತರೆ ಸಾಕ್ಷಿಗಳಿಗೆ ಸಮನ್ಸ್‌ನ್ನು ಹೊರಡಿಸಲು ಕೋರಿಕೊಂಡಿರುತ್ತಾರೆ. ಈ ಪ್ರಕರಣದಲ್ಲಿ ಪಿರ್ಯಾದುದಾರರು, ಪ್ರತ್ಯಕ್ಷ

ಸಾಕ್ಷಿದಾರರು ತಮ್ಮ ವಿಚಾರಣೆಯಲ್ಲಿ ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಹೀಗಾಗಿ ಇತರೆ ಸಾಮಾನ್ಯ ಸಾಕ್ಷಿಗಳ ವಿಚಾರಣೆ ಅನಾವಶ್ಯಕವಾಗಿರುತ್ತದೆ. ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಲಾಯಿತು ಹಾಗೂ ಇತರೆ ಸಾಕ್ಷಿಗಳ ವಿಚಾರಣೆಯನ್ನು ಕೈ ಬಿಡಲಾಯಿತು. ಅಭಿಯೋಜನೆಯ ವಿಚಾರಣೆಯಲ್ಲಿ ಆರೋಪಿತರ ವಿರುದ್ಧ ಯಾವುದೇ ಅಂಶಗಳು ಕಂಡು ಬರದ ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆಗೆ ವಿನಾಯಿತಿ ನೀಡಲಾಗಿದೆ. ಆರೋಪಿತರು ತಮ್ಮ ಪ್ರತಿ ರಕ್ಷಣೆಗೆ ಯಾವುದೇ ಸಾಕ್ಷಿಯನ್ನು ಮಾಡಿಸಿರುವುದಿಲ್ಲ.

**7.**ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿತರ ಪರ ವಕೀಲರ ವಾದ ವಿವಾದವನ್ನು ಕೇಳಲಾಯಿತು.

**8.** ಈ ಪ್ರಕರಣವನ್ನು ತೀರ್ಮಾನಿಸಲು ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತದೆಃ-

<u>ಅಂಶಗಳು</u>

**1)** ಆರೋಪಿತರುಗಳು ತಿಪಟೂರು ತಾಲ್ಲೂಕು, ಕಸಬಾ ಹೋಬಳಿ, ರಾಮಶೆಟ್ಟಿ ಹಳ್ಳಿ ಗ್ರಾಮದ ಸರ್ವೇ ನಂ.25/1, 25/4 ರ ಜಮೀನಿನ ಚಾಸಾ.1 ಅದಿತ್ಯರವರ ತೋಟದ ಮನೆಯ ಬಳಿ ಬಂದು ಜಮೀನಿನಲ್ಲಿ ನಡೆದಾಡುವ ದಾರಿಯ ವಿಚಾರವಾಗಿ ಆರೋಪಿತರು ದಿನಾಂಕಃ 03.02.2024 ರಂದು ಮದ್ಯಾಹ್ನ 12.30 ಗಂಟೆ ಸಮಯದಲ್ಲಿ 1 ನೇ ಆರೋಪಿತರು ಚಾಸಾ.1 ರವರಿಗೆ ನಮ್ಮ ತೋಟಕ್ಕೆ ಹೋಗುವ ದಾರಿಗೆ ಅಡ್ಡಲಾಗಿ ಕಲ್ಲು ಕಂಬವನ್ನು

ನೆಟ್ಟಿರುತ್ತೀರಾ ಬೋಳಿ ಮಕ್ಕಳಾ, ಸೂಳೆ ಮಕ್ಕಳಾ ಅಂತ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **504** ಸಹವಾಚಕ **34** ರ ಅಡಿಯಲ್ಲಿ ಶಿಕ್ಷಾರ್ಹಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

**2)** ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 2 ರಿಂದ 4 ನೇ ಆರೋಪಿತರಾದ ನೀವುಗಳು ಚಾಸಾ.1 ಅದಿತ್ಯ, ಚಾಸಾ.2 ಸುನಂದ ಮತ್ತು ಚಾಸಾ.3 ಬಸವರಾಜುರವರುಗಳಿಗೆ ಇನ್ನು ಮುಂದೆ ಈ ದಾರಿಯಲ್ಲಿ ನಾವು ನಡೆದಾಡುವಾಗ ಅಡ್ಡಿಪಡಿಸಿದರೆ ನಿಮ್ಮಗಳನ್ನು ನಾವು ಸುಮ್ಮನೆ ಬಿಡುವುದಿಲ್ಲ ಅಂತಾ ಕೊಲೆ ಬೆದರಿಕೆ ಹಾಕಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **506** ಸಹವಾಚಕ **34** ರ ಅಡಿಯಲ್ಲಿ ಶಿಕ್ಷಾರ್ಹಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

**3)**ಕೊನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ *2* ನೇ ಆರೋಪಿಯಾದ ನೀವು ಚಾಸಾ.*2* ಸುನಂದರವರ ವಾಸದ ಮನೆಯ ಕಿಟಕಿಯ ಗಾಜನ್ನು ಹೊಡೆದು 1,000/-ರೂ. ನಷ್ಟವನ್ನುಂಟು ಮಾಡಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ ***427*** ಸಹವಾಚಕ **34** ರ ಅಡಿಯಲ್ಲಿ ಶಿಕ್ಷಾರ್ಹಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

**4)** ಯಾವ ಆದೇಶ ?

**9.** ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿದೆಃ

ಅಂಶ ನಂ.1 ರಿಂದ 3 : ನಕಾರಾತ್ಮ ಕವಾಗಿ
ಅಂಶ ನಂ.4 : ಕೆಳಗಿನ ಆದೇಶದಂತೆ,

:: ಕಾರಣಗಳು ::

**10.** ಅಂಶ **1** ರಿಂದ **3:-** ಈ ಎಲ್ಲಾ ಅಂಶಗಳು ಒಂದಕ್ಕೊಂದು ಪರಸ್ಪರ ಸಂಬಂಧ ಇರುವುದರಿಂದ ಮತ್ತು ಪುನರಾವರ್ತನೆ ತಪ್ಪಿಸುವ ಸಲುವಾಗಿ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**11.** ಅಭಿಯೋಜನೆಯವರು ಈ ಪ್ರಕರಣದಲ್ಲಿ ಆರೋಪಿಸಿದಂತೆ 1, 2, 3 ಮತ್ತು 4 ನೇ ಆರೋಪಿತರಾದ ನೀವುಗಳು ತಿಪಟೂರು ತಾಲ್ಲೂಕು, ಕಸಬಾ ಹೋಬಳಿ, ರಾಮಶೆಟ್ಟಿ ಹಳ್ಳಿ ಗ್ರಾಮದ ಸರ್ವೆ ನಂ.25/1, 25/4 ರ ಜಮೀನಿನ ಚಾಸಾ.1 ರವರ ತೋಟದ ಮನೆಯ ಬಳಿ ಬಂದು ಜಮೀನಿನಲ್ಲಿ ನಡೆದಾಡುವ ದಾರಿಯ ವಿಚಾರವಾಗಿ 1, 2, 3 ಮತ್ತು 4 ನೇ ಆರೋಪಿತರಾದ ನೀವುಗಳು ದಿಃ03.02.2024 ರಂದು ಮದ್ಯಾಹ್ನ 12.30 ಗಂಟೆ ಸಮಯದಲ್ಲಿ ಸಮಾನ ಉದ್ದೇಶದಿಂದ 1 ನೇ ಆರೋಪಿತರು ಚಾಸಾ.1 ಅದಿತ್ಯರವರಿಗೆ ನಮ್ಮ ತೋಟಕ್ಕೆ ಹೋಗುವ ದಾರಿಗೆ ಅಡ್ಡಲಾಗಿ ಕಲ್ಲು ಕಂಬವನ್ನು ನೆಟ್ಟಿರುತ್ತೀರಾ ಬೋಳಿ ಮಕ್ಕಳಾ, ಸೂಳೆ ಮಕ್ಕಳಾ ಅಂತಾ ಅವಾಚ್ಯವಾಗಿ ಬೈದ್ದು 2, 3 ಮತ್ತು 4 ನೇ ಆರೋಪಿತರುಗಳು ಕಲ್ಲು ತಂತಿ ಕಲ್ಲು ಕಂಬವನ್ನು ಕೀಳುತ್ತಿರುವಾಗ ಕೇಳಲು ಹೋದ ಚಾಸಾ.1 ಅದಿತ್ಯ, ಚಾಸಾ.2 ಸುನಂದ ಮತ್ತು ಚಾಸಾ.3 ಬಸವರಾಜುರವರುಗಳಿಗೆ ಸೂಳೆಮಕ್ಕಳಾ ಬೋಳಿಮಕ್ಕಳಾ ದಾರಿಗೆ ಅಡ್ಡಲಾಗಿ ಕಲ್ಲು ನೆಟ್ಟಿರುತ್ತಾರೆಂತಾ

ಬೈದು ಇನ್ನು ಮುಂದೆ ಈ ದಾರಿಯಲ್ಲಿ ನಾವು ನಡೆದಾಡುವಾಗ ಅಡ್ಡಿಪಡಿಸಿದರೆ ನಿಮ್ಮಗಳನ್ನು ನಾವು ಸುಮ್ಮನೆ ಬಿಡುವುದಿಲ್ಲವೆಂತಾ ಕೊಲೆ ಬೆದರಿಕೆ ಹಾಕಿದ್ದು ಮತ್ತು 2 ನೇ ಆರೋಪಿತರು ಕಲ್ಲನ್ನು ತೆಗೆದುಕೊಂಡು ಚಾಸಾ.2 ಸುನಂದರವರ ವಾಸದ ಮನೆಯ ಕಿಟಕಿಯ ಗಾಜನ್ನು ಹೊಡೆದು ಹಾಕಿ ರೂ.1000/- ನಷ್ಟವನ್ನುಂಟು ಮಾಡಿದ್ದು ಎಂಬುದನ್ನು ರುಜುವಾತು ಪಡಿಸಬೇಕಾಗಿದೆ.

**12.**ಆರೋಪಿತರ ವಿರುದ್ಧದ ಅಪಾದನೆಗಳನ್ನು ರುಜುವಾತುಪಡಿಸಲು ಅಭಿಯೋಜನೆಯವರು ಫ್ರಾಸಾ-1 ರಿಂದ 3 ರವರನ್ನು ವಿಚಾರಣೆ ಮಾಡಿದ್ದು ನಿಪಿ-1 ರಿಂದ 6 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

**13.** ಪ್ರಸ್ತುತ ಪ್ರಕರಣದಲ್ಲಿ ಉಭಯ ಪಕ್ಷಗಾರರ ವಾದ ಮಂಡನೆ ಮತ್ತು ಅಭಿಯೋಜನೆ ವಿಚಾರಿಸಲ್ಪಟ್ಟ ಸಾಕ್ಷ್ಯವನ್ನು ಪರಿಶೀಲಿಸಲಾಯಿತು. ಅಭಿಯೋಜನೆಯು ವಿಚಾರಣೆ ಮಾಡಲ್ಪಟ್ಟ ಫ್ರಾಸಾ-1/ಚಾಸಾ-1 ಅದಿತ್ಯ ಇವರು ಪಿರ್ಯಾದುದಾರರಾಗಿದ್ದು ತಮ್ಮ ಸಾಕ್ಷದಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿತರು ತನಗೆ ಸಂಬಂಧಿಕರಾಗಬೇಕು, ಚಾಸಾ-2 ತನ್ನ ತಾಯಿ, ಚಾಸಾ.3 ತನ್ನ ದೊಡ್ಡಪ್ಪ, ಚಾಸಾ-4 ತನ್ನ ಸ್ನೇಹಿತ, ಚಾಸಾ-5 ತನ್ನ ಸಂಬಂಧಿಕ, ನಮ್ಮ ಮತ್ತು ಆರೋಪಿತರ ನಡುವೆ ಜಮೀನಿನ ದಾರಿಯ ಸಂಬಂದ ಸಣ್ಣ ಪುಟ್ಟ ಗಲಾಟೆ ಆಗುತ್ತಿದ್ದು, ಇದರ ಸಂಬಂದ ತಾನು ಪೊಲೀಸ್ ಠಾಣೆಗೆ ಹೋಗಿ ಆರೋಪಿತರನ್ನು ಕರೆಸಿ ಬುದ್ದಿವಾದ ಹೇಳುವಂತೆ ಕೇಳಿಕೊಂಡಿದ್ದು, ಆಗ ಪೊಲೀಸರು ತನ್ನ ಸಹಿಗಳನ್ನು ಪಡೆದಿದ್ದು, ಸದರಿ ಸಹಿಗಳನ್ನು ಯಾವ ಕಾರಣಕ್ಕಾಗಿ ಪಡೆದಿರುತ್ತಾರೆಂದು ತನಗೆ ಗೊತ್ತಿಲ್ಲ, ಈ

ಪ್ರಕರಣದ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲ, ಆರೋಪಿತರು ತನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಜೀವ ಬೆದರಿಕೆ ಹಾಕಿರುವುದಿಲ್ಲ ಮತ್ತು ತನಗೆ ಯಾವುದೇ ನಷ್ಟ ಉಂಟು ಮಾಡಿರುವುದಿಲ್ಲ, ತನ್ನ ಸಮಕ್ಷಮ ಯಾವುದೇ ಪಂಚನಾಮೆ ಕ್ರಮ ಜರುಗಿಸಿರುವುದಿಲ್ಲ ತಾನು ಯಾವುದೇ ಘಟನಾ ಸ್ಥಳವನ್ನು ತೋರಿಸಿರುವುದಿಲ್ಲ ಹಾಗೂ ತನ್ನ ಸಮಕ್ಷಮ ಯಾವುದೇ ವಸ್ತುವನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ, ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಅಂಥ ಘಟನೆ ಕುರಿತು ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿಯದೇ ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದು ಸದರಿಯವರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಿದರೂ ಸಹ ಘಟನೆ ಕುರಿತು ಪೂರಕವಾಗಿ ಸಾಕ್ಷಿ ನುಡಿದಿರುವುದಿಲ್ಲ. ಸದರಿಯವರು ಪಿರ್ಯಾದಿಯ ನಿಪಿ.1 ದೂರನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿ ನಿರಾಕರಿಸಿರುತ್ತಾರೆ ಮತ್ತು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುತ್ತೇವೆಂದರೆ ಸರಿ ಅಂತಾ ಒಪ್ಪಿಕೊಂಡಿರುತ್ತಾರೆ.

**14.**ಪ್ರಾಸಾ-2/ಚಾಸಾ-3 ಕೆ.ಎಲ್.ಬಸವರಾಜು ಮತ್ತು ಪ್ರಾಸಾ.3/ಚಾಸಾ-2 ಸುನಂದ .ಜಿ ರವರು ಘಟನೆಯ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ತಮ್ಮ ಸಾಕ್ಷದಲ್ಲಿ, ಈ ಪ್ರಕರಣದ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ, ತಾವು ಯಾವುದೇ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ, ತಾವು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ, ಸಾಕ್ಷಿ ನ್ಯಾಯಾಲಯದ

ಮುಂದಿರುವ ಮುದ್ದೆಮಾಲನ್ನು ನೋಡಿ ಗುರುತಿಸಿರುವುದಿಲ್ಲ ಅಂಥ ಘಟನೆ ಕುರಿತು ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿಯದೇ ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದು ಸದರಿಯವರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಿದರೂ ಸಹ ಘಟನೆ ಕುರಿತು ಪೂರಕವಾದ ಅಂಶವನ್ನು ಹೊರಗೆಡುವುದಿಲ್ಲ.

**15.** ಅಭಿಯೋಜನೆಯ ಸಾಕ್ಷ್ಯವನ್ನು ಸಮಗ್ರವಾಗಿ ಗಮನಿಸಿದಾಗ ಫ್ರಾಸಾ-1/ಚಾಸಾ-1 ರವರು ಪಿರ್ಯಾದುದಾರರಾಗಿದ್ದು, ಫ್ರಾಸಾ-2/ ಚಾಸಾ-3, ಪಾಸಾ.3/ಚಾಸಾ.2 ರವರು ಘಟನೆಯ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಸದರಿ ಸಾಕ್ಷಿಗಳು ಅಭಿಯೋಜನೆಗೆ ಘಟನೆ ಕುರಿತು ಪೂರಕವಾಗಿ ಸಾಕ್ಷಿ ನುಡಿಯದೇ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಸಧ್ರಿಯವರನ್ನು ಪ್ರತಿಕೂಲ ಸಾಕ್ಷಿ ಅಂಥ ಪರಿಗಣಿಸಿ ಸ.ಸ.ಅ. ರವರು ಪಾಟೀಸವಾಲು ಮಾಡಿದರು ಸಹ ಘಟನೆ ಕುರಿತು ಪೂರಕವಾದ ಅಂಶವನ್ನು ಹೊರಗೆಡವಿರುವುದಿಲ್ಲ. ಅದೇ ರೀತಿ ಫ್ರಾಸಾ-1/ಚಾಸಾ-1 ಪಿರ್ಯಾದುದಾರರಾಗಿದ್ದು ಸಧ್ರಿಯವರು ನಿಪಿ.1 ರಂತೆ ದೂರನ್ನು ನೀಡಿರುವ ಬಗ್ಗೆ ಪೂರಕವಾಗಿ ಸಾಕ್ಷಿ ನುಡಿಯದೇ ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವುದರಿಂದ ನಿಪಿ.1 ದೂರು ಕೂಡಾ ಸಾಬೀತಾಗಿರುವುದಿಲ್ಲ. ಅಷ್ಟೇಅಲ್ಲದೇ ಫ್ರಾಸಾ 1 ರಿಂದ 3 ರವರು ಘಟನೆ ಕುರಿತು ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿಯದೇ ಇರುವುದರಿಂದ ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿದ ಸಾಕ್ಷಿಗಳ ವಿಚಾರಣೆಯಿಂದ

ಅಭಿಯೋಜನೆಯ ಪ್ರಕರಣಕ್ಕೆ ಯಾವುದೇ ರೀತಿಯಲ್ಲಿ ಸಹಾಯವಾಗುವುದಿಲ್ಲವೆಂದು ಪರಿಗಣಿಸಿ ಸಧ್ರಿಯವರ ಸಾಕ್ಷಿ ವಿಚಾರಣೆ ಕೈ ಬಿಡಲಾಗಿದೆ. ಅಷ್ಟೇಅಲ್ಲದೇ ಪ್ರಾಸಾ-1 ರಿಂದ 3ರವರು ಘಟನೆ ಕುರಿತು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ದಂ.ಪ್ರ.ಸಂ ಕಲಂ 313ರ ಅಡಿಯಲ್ಲಿ ಆರೋಪಿತರ ಹೇಳಿಕೆಗೆ ವಿನಾಯಿತಿ ನೀಡಲಾಗಿದೆ. ಆದಕಾರಣ ಪ್ರಾಸಾ-1 ರಿಂದ 3ರವರ ಸಾಕ್ಷ್ಯ ಆರೋಪಿತರನ್ನು ಶಿಕ್ಷಿಸಲು ಸಾಕಷ್ಟು ಸಾಕ್ಷ್ಯವಲ್ಲ. ಕಾರಣ ಅಭಿಯೋಜನೆಯು ಆರೋಪಿತರ ಮೇಲೆ ಹೊರಸಿದ ಆರೋಪಿಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲವಾಗಿದೆ ಅಂತಾ ನಿರ್ಣಯಿಸಿ ಹೆಚ್ಚಿನ ಚರ್ಚೆ ಇಲ್ಲದೇ ಅಂಶ ನಂ.1 ರಿಂದ 3ಗಳನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

**16.** ಅಂಶ ನಂ**.4:-** ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆಃ-

**:: ಆದೇಶ ::**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರ ಅಡಿಯಲ್ಲಿ ಆರೋಪಿತರ ವಿರುದ್ಧ ಮಾಡಲಾಗಿರುವ ಭಾರತೀಯ ದಂಡ ಸಂಹಿತಿ ಕಲಂ 504, 506, 427 ಸಹವಾಚಕ 34ರ ಅಡಿಯಲ್ಲಿ ದೋಷಮುಕ್ತಗೊಳಿಸಿ ಆರೋಪಿತರನ್ನು ನಿರಪರಾಧಿಯೆಂದು ಬಿಡುಗಡೆ ಮಾಡಲಾಗಿದೆ.

ಹಿಂದೆ ನೀಡಿದ ಜಾಮೀನು ಮತ್ತು ಮುಚ್ಚಳಿಕೆಯು ಮೇಲ್ಮನವಿ ಸಲ್ಲಿಸುವ ಕಾಲಾ ಅವಧಿ ಮುಗಿಯವರೆಗೂ ಅಥವಾ 6 ತಿಂಗಳವರೆಗೂ ಚಾಲ್ತಿಯಲ್ಲಿ ಇರುತ್ತದೆ.

ಪಿಆರ್ ಸಂಖ್ಯೆ.185/2025 ರಲ್ಲಿ ಐಟಂ ನಂ.1 ರಲ್ಲಿ ಹೊಡೆದು ಚೂರಾದ ಚೂಪಾದ ಗಾಜಿನ ಚೂರು (ಕಿಟಕಿಗೆ ಅಳವಡಿಸಿರುವ ಗಾಜು) ಇರುತ್ತದೆ, ಇದು ಬೆಲೆ ಬಾಳದ ವಸ್ತು ಆಗಿರುವುದರಿಂದ ಅಪೀಲ ಅವಧಿ ಮುಗಿದ ನಂತರ ನಾಶ ಪಡಿಸಲು ಆದೇಶಿಸಿದೆ.

(ತೀರ್ಪಿನ್ನು ಶೀಘ್ರಲಿಪಿಗಾರಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿದ ನಂತರ, ತಿದ್ದುಪಡಿಸಿ, ಸಹಿ ಮಾಡಿ, ಇಂದು ಅಂದರೆ ದಿನಾಂಕ 20 ನೇ ಜೂಲೈ ಮಾಹೆ 2026 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**Sd/-**
(ಶ್ರೀ ಭರತ್ ಚಂದ್ರ ಕೆ.ಎಸ್)
ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ತಿಪಟೂರು.

**-:: ಅನುಬಂಧ ::-**

ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಹೆಸರು:-

ಫ್ರಾಸಾ-1 - ಅದಿತ್ಯ
ಫ್ರಾಸಾ-2 - ಕೆ.ಎಲ್.ಬಸವರಾಜು
ಫ್ರಾಸಾ-3 - ಸುನಂದ.ಜಿ

ಅಭಿಯೋಜನೆ ಪರ ಗುರುತಿಸಿಕೊಂಡ ದಾಖಲಾತೆಗಳು :-

ನಿಪಿ-1 - ದೂರು
ನಿಪಿ-1(ಎ) - ಫ್ರಾಸಾ.1 ರವರ ಸಹಿ
ನಿಪಿ-2 - ಸ್ಥಳ ಪಂಚನಾಮೆ
ನಿಪಿ-2(ಎ) - ಫ್ರಾಸಾ.1 ರವರ ಸಹಿ
ನಿಪಿ-3 - ಭಾವಚಿತ್ರ
ನಿಪಿ-4 - ಫ್ರಾಸಾ.1 ರವರ ಹೇಳಿಕೆ
ನಿಪಿ-5 - ಫ್ರಾಸಾ.3 ರವರ ಹೇಳಿಕೆ
ನಿಪಿ-6 - ಫ್ರಾಸಾ.2 ರವರ ಹೇಳಿಕೆ

ಅಭಿಯೋಜನೆ ಪರ ಗುರುತಿಸಲಾದ ಮು.ಮಾ ಪಟ್ಟಿ:-

ಇಲ್ಲ

ಆರೋಪಿ ಪರ ಗುರುತಿಸಿಕೊಂಡ ಸಾಕ್ಷಿದಾರರ ಹೆಸರು

ಇಲ್ಲ

ಆರೋಪಿ ಪರ ಗುರುತಿಸಿಕೊಂಡ ದಾಖಲಾತಿಗಳು

ಇಲ್ಲ

**Sd/-**
ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ತಿಪಟೂರು.